ದಿಃ 29.01.2026

## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಹೊಳಲ್ಕೆರೆ.

## ಸಿ.ಸಿ. 1390/2024

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಪ್ರವೀಣ್ ಕುಮಾರ್ ಹೆಚ್ | ಪ್ರಾಸಾಃ 3 |
| ತಂದೆಯ/ಗಂಡನ ಹೆಸರು | : | ಹನುಮಂತನಾಯ್ಕ | ಚಾಸಾಃ 3 |
| ವಯಸ್ಸು | : | 41 ವರ್ಷ | |
| ಕೆಲಸ | : | ಅಬಕಾರಿ ಪೇದೆ, ಅಬಕಾರಿ ನಿರೀಕ್ಷಕರ ಕಛೇರಿ, | ಸಾ ಪ್ರ ಬೋ |
| ವಾಸ | : | ಹೊಸದುರ್ಗ | ದಿಃ29.01.2026 |

**ಮುಖ್ಯ ವಿಚಾರಣೆ ಎ.ಪಿ.ಪಿ.ಯವರಿಂದಃ**

1. ನಾನು 2016 ರಿಂದ ದಿನಾಂಕ 31.07.2025 ರವರೆಗೆ ಹೊಳಲ್ಕೆರೆ ಅಬಕಾರಿ ನಿರೀಕ್ಷಕರ ಕಛೇರಿಯಲ್ಲಿ ಪೇದೆಯಾಗಿ ಕರ್ತವ್ಯ ನಿರ್ವಹಿಸುತ್ತಿರುತ್ತೇನೆ.

2. ದಿನಾಂಕ 17.04.2023 ರಂದು 2024 ರ ಸಾರ್ವತ್ರಿಕ ಲೋಕಸಭಾ ಚುನಾವಣೆ ನಡೆಯುತ್ತಿದ್ದು, ಆ ನಿಮಿತ್ತ ನೀತಿ ಸಂಹಿತೆ ಜಾರಿಯಲ್ಲಿತ್ತು. ಮಾನ್ಯ ಅಬಕಾರಿ ಉಪ ಆಯುಕ್ತರು, ಚಿತ್ರದುರ್ಗ ರವರ ನಿರ್ಧೇಶನದ ಮೇರೆಗೆ ಹಾಗೂ ಅಬಕಾರಿ ಉಪ ಅಧೀಕ್ಷಕರು, ಚಿತ್ರದುರ್ಗ ರವರ ಮಾರ್ಗದರ್ಶನದ ಮೇರೆಗೆ ಚಾಸಾ.4, 6 ಮತ್ತು ನಾನು ಗಸ್ತು ಕರ್ತವ್ಯದಲ್ಲಿ ಇದ್ದೆವು. ಚಾಸಾ-6 ರವರಿಗೆ ಬಾತ್ಮಿದಾರರಿಂದ ಹೊಳಲ್ಕೆರೆ ಲಂಬಾಣಿಹಟ್ಟಿ ಗ್ರಾಮದ ಆರೋಪಿತರು ಅಕ್ರಮವಾಗಿ ಮಧ್ಯವನ್ನು ಮಾರಾಟ ಮಾಡುತ್ತಿದ್ದಾರೆ ಎಂದು ಮಾಹಿತಿ ಬಂದಿರುತ್ತದೆ. ನಂತರ ಚಾಸಾ-6 ರವರು ನನ್ನನ್ನು ಮತ್ತು ಚಾಸಾ-4 ರವರನ್ನು ನಮ್ಮ ಇಲಾಖೆಗೆ ಸೇರಿದ ಕೆಎ-16-ಜಿ-634 ರ ಬೂಲೇರೋ ವಾಹನದಲ್ಲಿ ಹೊಳಲ್ಕೆರೆ ಲಂಬಾಣಿಹಟ್ಟಿ ಗ್ರಾಮದ ತಿರುವಿನ ಬಳಿ ಕರೆದುಕೊಂಡು ಹೋದರು. ಸದರಿ ಗ್ರಾಮದ ತಿರುವಿನ ಬಳಿ ಇದ್ದಂತಹ ಚಾಸಾ-1 ಮತ್ತು 2 ರವರಿಗೆ ಪಂಚನಾಮೆಗೆ ಸಹಕರಿಸುವಂತೆ ಚಾಸಾ-6 ರವರು ಮಾಹಿತಿಯನ್ನು ನೀಡಿ ನೋಟೀಸನ್ನು ನೀಡಿರುತ್ತಾರೆ. ನಂತರ ಚಾಸಾ-1 ಮತ್ತು 2 ರವರನ್ನು ನಮ್ಮ ಠಾಣಾ ಜೀಪಿನಲ್ಲಿ ಕರೆದುಕೊಂಡು ಆರೋಪಿತರ ಮನೆಗೆ ಕರೆದುಕೊಂಡು ಹೋಗಿದ್ದು, ಆಗ ಆರೋಪಿ ನಮ್ಮನ್ನು ನೋಡಿ ಓಡಿ ಹೋಗಿರುತ್ತಾರೆ. ನಂತರ ಆರೋಪಿತರ ಮನೆಯ ಬಳಿ ಹೋಗಿ ಪರಿಶೀಲನೆ ಮಾಡಲು ಶೋಧನಾ ವಾರೆಂಟ್ ಅನ್ನು ಪಡೆದುಕೊಳ್ಳಲು ಕಾಲವಕಾಶ ಇಲ್ಲದ ಕಾರಣ ಚಾಸಾ-6 ರವರು ನಮ್ಮ ಮತ್ತು ಚಾಸಾ-1 ಮತ್ತು 2 ರವರ ಸಮಕ್ಷಮ ವರದಿಯನ್ನು ತಯಾರಿಸಿಕೊಂಡಿರುತ್ತಾರೆ. ನಂತರ ಆರೋಪಿತರ ಮನೆಯ ಒಳಗೆ ಪ್ರವೇಶ ಮಾಡಿ ನೋಡಲಾಗಿ ಟೇಬಲ್ ನ ಕೆಳಭಾಗದಲ್ಲಿ ಮೂರು ರಟ್ಟಿನ ಬಾಕ್ಸ್‌ಗಳು ಹಾಗೂ ಬಿಳಿ ಬಣ್ಣದ ಚೀಲ ಇದ್ದು, ಅವುಗಳನ್ನು ತೆಗೆದು ನೋಡಲಾಗಿ 90

ಎಂ.ಎಲ್ ನ 2 ರಾಜಾವಿಸ್ಕಿಯ ಸೀಲ್ ಮಾಡಿರುವ ಬಾಕ್ಸ್ ಗಳು ಇದ್ದವು ಮತ್ತು ಓರಿಜಿನಲ್ ಚಾಯ್ಸ್ ವಿಸ್ಕಿಯ 90 ಎಂ.ಎಲ್ ನ 1 ಸೀಲ್ ಮಾಡಿದ ಬಾಕ್ಸ್ ಇತ್ತು. ಬಿಳಿ ಚೀಲದ 500 ಎಂ.ಎಲ್ ನ 24 ಬಿಯರ್ ಟಿನ್ ಬಾಟಲ್ ಗಳು ಇದ್ದವು. ನಂತರ ಓಡಿ ಹೋದ ಮಹಿಳೆಯ ಹೆಸರು ಮತ್ತು ವಿಳಾಸ ಕೇಳಲಾಗಿ ವಿಮಾಲಾಬಾಯಿ ಕೋಂ ಮೋಹನ್, 30 ವರ್ಷ, ಹೊಳಲ್ಕೆರೆ ಲಂಬಾಣಿಹಟ್ಟಿ ಎಂದು ತಿಳಿಸಿರುತ್ತಾರೆ. ಅಮಾನತ್ತುಪಡಿಸಿಕೊಂಡ ರಟ್ಟಿನ ಬಾಕ್ಸಿನಲ್ಲಿ ತಲಾ 10 ಪೌಚುಗಳನ್ನು ಮಾದರಿ ಪರೀಕ್ಷೆಗಾಗಿ ತೆಗೆದುಕೊಂಡು ಹಾಗೂ ಬಿಳಿ ಚೀಲದಲ್ಲಿದ್ದ 10 ಟಿನ್ ಬಾಟಲಿಗಳನ್ನು ತೆಗೆದುಕೊಂಡು ರಾಸಾಯನಿಕ ಪರೀಕ್ಷಾ ವರದಿಗಾಗಿ ಕಳುಹಿಸಲು ಬಿಳಿ ಬಟ್ಟೆಯಲ್ಲಿ ಹಾಕಿ ಅರಗಿನ ಸಹಾಯದಿಂದ ಸೀಲು ಮಾಡಿರುತ್ತಾರೆ. ನಂತರ ಮಾದರಿ ಚೀಟಿಗಳನ್ನು ತಯಾರಿಸಿ ಪಂಚರ ಸಹಿಯನ್ನು ಪಡೆದು ಮುದ್ದೆ ಮಾಲಿಗೆ ಅಂಟಿಸಿರುತ್ತಾರೆ. ಸಂಜೆ 05.00 ರಿಂದ 06.00 ರವೆರೆಗೆ ಮಹಜರನ್ನು ಜರುಗಿಸಿರುತ್ತಾರೆ. ಮಧ್ಯದ ಮಾಲನ್ನು ಅಮಾನತ್ತುಪಡಿಕೊಂಡಿರುತ್ತಾರೆ. ಸಾಕ್ಷಿ ನ್ಯಾಯಾಲಯದ ಮುಂದಿರುವ ಆರೋಪಿತನ್ನು ಮತ್ತು ಮು.ಮಾ.1 ನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ನಿಪಿ-5 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ನಿಪಿ-5(ಸಿ) ಎಂದು ಗುರುತಿಸಲಾಯಿತು. ನಿಪಿ-5 ರ ಮಹಜರನ್ನು ನಾನೇ ಬರೆದಿರುತ್ತೇನೆ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಯು.ಎಸ್ ವಕೀಲರಿಂದ**

3. ಗಸ್ತು ಕರ್ತವ್ಯದಲ್ಲಿ ನಾನು, ಚಾಸಾ-4 ಮತ್ತು 6 ರವರು ಇದ್ದೇವು. ದಿಃ17.04.2023 ರಂದು ಹೊಳಲ್ಕೆರೆ ಟೌನಿನಲ್ಲಿ ಗಸ್ತು ಕರ್ತವ್ಯವನ್ನು ಮಾಡಿರುತ್ತೇವೆ. ಗಸ್ತು ಕರ್ತವ್ಯದಿಂದ ನೇರವಾಗಿ ಕೃತ್ಯ ನಡೆದ ಸ್ಥಳಕ್ಕೆ ಹೋಗಿರುತ್ತೇವೆ. ನಮ್ಮ ಇಲಾಖೆಯ ಠಾಣಾ ಜೀಪನ್ನು ಗೋವಿಂದರಾಜು ರವರು ಚಾಲನೆ ಮಾಡುತ್ತಿದ್ದರು. ಆರೋಪಿತರ ಮನೆಯನ್ನು ಪಂಚರು ತೋರಿಸಿರುತ್ತಾರೆ. ಓಡಿ ಹೋದ ವ್ಯಕ್ತಿಯ ಹೆಸರನ್ನು ಅಕ್ಕ-ಪಕ್ಕದ ಸಾರ್ವಜನಿಕರು ತಿಳಿಸಿರುತ್ತಾರೆ. ಆರೋಪಿತರ ಹೆಸರನ್ನು ಹೇಳಿದವರ ಬಗ್ಗೆ ಮಹಜರಿನಲ್ಲಿ ಬರೆದಿರುತ್ತೇನೆ. ಆರೋಪಿತರ ಮನೆಯ ಒಳಗೆ ನಾನು, ಚಾಸಾ-4, 6 ಚಾಸಾ-1 ಮತ್ತು 2 ರವರು ಹೋಗಿದ್ದೇವು. ಆರೋಪಿತರ ಮನೆಯ ಒಳಗೆ ಇದ್ದಂತಹ ಟೇಬಲಿನ ಚೆಕ್ಕುಬಂದ ಗೊತ್ತಿಲ್ಲ. ಬಾಕ್ಸಿನ ಮೇಲೆ ಇದ್ದಂತಹ ಹೆಸರನ್ನು ಮಹಜರಿನಲ್ಲಿ ಬರೆದಿರುತ್ತೇನೆ. ಅಮಾನತ್ತುಪಡಿಸಿಕೊಂಡ ಮಧ್ಯದ ಪೌಚುಗಳ ಉತ್ಪಾದನಾ ದಿನಾಂಕ, ಘಟಕ ಮತ್ತು ಬ್ಯಾಚ್ ಸಂಖ್ಯೆ ಕುರಿತು ಗೊತ್ತಿಲ್ಲ. ಮಹಜರಿಗೆ ಆರೋಪಿತರ ಅಕ್ಕ-ಪಕ್ಕದ ಮನೆಯವರ ಸಹಿಯನ್ನು ಪಡೆದುಕೊಂಡಿಲ್ಲ. ಅಕ್ಕ-ಪಕ್ಕದ ಮನೆಯವರು ಸಹಿ ಮಾಡಲು ನಿರಾಕರಿಸಿರುತ್ತಾರೆ. ಸದರಿ ಬಾಕ್ಸುಗಳನ್ನು ನಾಶಪಡಿಸಿರುತ್ತೇವೆ. ತಾಲ್ಲೂಕು ದಂಡಾಧಿಕಾರಿಯವರ ಮತ್ತು ಉಪ ಆಯುಕ್ತಕರು ಅಬಕಾರಿ ರವರ ಸಮಕ್ಷಮದಲ್ಲಿ ನಾಶಪಡಿಸಿರುತ್ತೇವೆ. ಆ ಕುರಿತು ನ್ಯಾಯಾಲಯಕ್ಕೆ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿಲ್ಲ. ನಾವು ಸ್ಥಳಕ್ಕೆ ಹೋದಾಗ ಸಂಜೆ 05.00 ಗಂಟೆ ಆಗಿತ್ತು. ಹೊಳಲ್ಕೆರೆ ಟೌನಿನಿಂದ ಸ್ಥಳಕ್ಕೆ ಹೋಗಲು 05 ನಿಮಿಷ ಬೇಕಾಗುತ್ತದೆ. ಆರೋಪಿತರು ನಮ್ಮನ್ನು ನೋಡಿ 50 ಅಡಿ ದೂರದಲ್ಲಿ ಓಡಿ ಹೋಗಿರುತ್ತಾರೆ.

ದಿ: 29.01.2026

ಆರೋಪಿತರನ್ನು ಹಿಡಿಯಲು ಪ್ರಯತ್ನ ಪಟ್ಟಿದ್ದು, ಸಿಕ್ಕಿರುವುದಿಲ್ಲ. ಆರೋಪಿತರಿಗೂ ಮುದ್ದೆ ಮಾಲಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ತಪ್ಪನ್ನು ಎಸಗದಿದ್ದಾಗ್ಯೂ ಚಾಸಾ.6 ರವರ ಮಾತನ್ನು ಕೇಳಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿನ ಎಲ್ಲಾ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿಯಿದೆ.

ಸಿ/ಸಿ ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ